| Roll No. | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 63 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 63 ] [ Total No. of Printed Pages : 24

**ಸಂಕೇತ ಸಂಖ್ಯೆ : 01-K** **ವಿಷಯ : ಪ್ರಥಮ ಭಾಷೆ — ಕನ್ನಡ**

**Code No. : 01-K** **Subject : First Language — KANNADA**

ದಿನಾಂಕ : 01. 04. 2011 ] [ Date : 01. 04. 2011

ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಪರಮಾವಧಿ ಅಂಕಗಳು : 125 ] [ Max. Marks : 125

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 14. | | 27. | | 40. | | 53. | |
| 2. | | 15. | | 28. | | 41. | | 54. | |
| 3. | | 16. | | 29. | | 42. | | 55. | |
| 4. | | 17. | | 30. | | 43. | | 56. | |
| 5. | | 18. | | 31. | | 44. | | 57. | |
| 6. | | 19. | | 32. | | 45. | | 58. | |
| 7. | | 20. | | 33. | | 46. | | 59. | |
| 8. | | 21. | | 34. | | 47. | | 60. | |
| 9. | | 22. | | 35. | | 48. | | 61. | |
| 10. | | 23. | | 36. | | 49. | | 62. | |
| 11. | | 24. | | 37. | | 50. | | 63. | |
| 12. | | 25. | | 38. | | 51. | | ∞ | |
| 13. | | 26. | | 39. | | 52. | | ∞ | |
| | | | | | | | | ***Total Marks*** | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 63 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ :

$15 \times 1 = 15$

1. ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳಿಗೆ ಹೀಗೆನ್ನುವರು :

   (ಎ) ದೀರ್ಘಸ್ವರ (ಬಿ) ಹ್ರಸ್ವಸ್ವರ

   (ಸಿ) ಪ್ಲುತಸ್ವರ (ಡಿ) ಸಪ್ತಸ್ವರ

   *ಉತ್ತರ :* ____________________

2. ಕ್ರಿಯಾಪದಗಳ ಮೂಲ ರೂಪ

   (ಎ) ಧಾತು (ಬಿ) ಸಾಧಿತ ಧಾತು

   (ಸಿ) ವಿದ್ಯರ್ಥಕ (ಡಿ) ನಿಷೇಧ

   *ಉತ್ತರ :* ____________________

3. ಅನ್ವರ್ಥಕ ನಾಮಪದಕ್ಕೆ ಉದಾಹರಣೆ

(ಎ) ಪಟ್ಟಣ (ಬಿ) ವಿಜ್ಞಾನಿ

(ಸಿ) ಪರ್ವತ (ಡಿ) ಹುಡುಗ

*ಉತ್ತರ :* ____________________

4. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆ

(ಎ) ನೀನು (ಬಿ) ನೀವು

(ಸಿ) ತಾನು (ಡಿ) ನಾವು

*ಉತ್ತರ :* ____________________

5. 'ಬರೆ' ಈ ಪದದ ವಿಧ್ಯರ್ಥಕ ರೂಪ

(ಎ) ಬರೆದಾನು (ಬಿ) ಬರೆಯನು

(ಸಿ) ಬರೆಯಿರಿ (ಡಿ) ಬರೆಯಲಿ

*ಉತ್ತರ :* ____________________

6. ಹಳಗನ್ನಡ ಪಂಚಮಿ ವಿಭಕ್ತಿ ಪ್ರತ್ಯಯ

(ಎ) ಅತ್ತಣಿಂ (ಬಿ) ಇಂದಂ

(ಸಿ) ಅಂ (ಡಿ) ಒಳ್

*ಉತ್ತರ :* ____________________

7. 'ಕಂಬನಿ' ಇದು ಈ ಸಂಧಿಗೆ ಉದಾಹರಣೆ :

(ಎ) ಜಶ್ತ್ವ (ಬಿ) ಆದೇಶ

(ಸಿ) ಗುಣ (ಡಿ) ಆಗಮ

*ಉತ್ತರ :* ____________________

8. 'ಏಕಾಕ್ಷ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ :

(ಎ) ಗುಣ ಸಂಧಿ (ಬಿ) ಲೋಪ ಸಂಧಿ

(ಸಿ) ಸವರ್ಣದೀರ್ಘ ಸಂಧಿ (ಡಿ) ಅನುನಾಸಿಕ

*ಉತ್ತರ :* ____________________

9. 'ಸಂಧ್ಯಾ' ಪದದ ತದ್ಭವ ರೂಪ

(ಎ) ಸಂದ್ಯಾ (ಬಿ) ಸಂದ್ಯೆ

(ಸಿ) ಸಂಜೆ (ಡಿ) ಸಮಯ

*ಉತ್ತರ :* ____________________

10. 'ಏಳುತಾಲೇ' ಪದದ ಗ್ರಾಂಥಿಕ ರೂಪ

(ಎ) ಏಳುವಳು (ಬಿ) ಏಳುತ್ತಾಳೆ

(ಸಿ) ಏಳುವಾಗಲೇ (ಡಿ) ಎದ್ದಳು

*ಉತ್ತರ :* ____________________

11. ಈ ಪದವು ಅನುಕರಣಾವ್ಯಯಕ್ಕೆ ಉದಾಹರಣೆ :

(ಎ) ಬೇಗಬೇಗ (ಬಿ) ಓಡುಓಡು

(ಸಿ) ಗಿಡಗಂಟೆ (ಡಿ) ಧಗಧಗ

*ಉತ್ತರ :* ____________________

12. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

(ಎ) ಉದ್ಧರಣ ಚಿಹ್ನೆ (ಬಿ) ಭಾವಸೂಚಕ ಚಿಹ್ನೆ

(ಸಿ) ಪ್ರಶ್ನಾರ್ಥಕ ಚಿಹ್ನೆ (ಡಿ) ಅರ್ಧವಿರಾಮ

*ಉತ್ತರ :* ____________________

13. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ, ಅದು

(ಎ) ಸಂಯೋಜಿತ ವಾಕ್ಯ (ಬಿ) ಮಿಶ್ರ ವಾಕ್ಯ

(ಸಿ) ಸಾಮಾನ್ಯ ವಾಕ್ಯ (ಡಿ) ವಾಕ್ಯ ಪ್ರಭೇದ

*ಉತ್ತರ :* ____________________

14. 'ಕಪರ್ದಿ' ಪದದ ಅರ್ಥ

(ಎ) ಪಾರ್ವತಿ (ಬಿ) ಬೇಡ

(ಸಿ) ಶಿವ (ಡಿ) ಅರ್ಜುನ

*ಉತ್ತರ :* ____________________

15. 'ಮಣೆಯಿತ್ತು' ಪದವು ಈ ಸಮಾಸಕ್ಕೆ ಉದಾಹರಣೆ :

(ಎ) ಕರ್ಮಧಾರೆಯ ಸಮಾಸ (ಬಿ) ತತ್ಪುರುಷ ಸಮಾಸ

(ಸಿ) ದ್ವಿಗು ಸಮಾಸ (ಡಿ) ಕ್ರಿಯಾ ಸಮಾಸ

*ಉತ್ತರ :* ____________________

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

16. ಸಿದ್ದಪ್ಪನ ಕಣ್ಣಿನಿಂದ ನೀರು ಜಾರಿ .................................................. ನೊಳಕ್ಕೆ ಬಿತ್ತು.

17. ಸರಸರನೆ .................................................. ಟೋಪಿಯವರೊಬ್ಬರು ಒಳಕ್ಕೆ ಬಂದುಬಿಟ್ಟರು.

18. ಅಮಾತ್ಯ ರಾಕ್ಷಸನ ಪ್ರಾಣ ಸ್ನೇಹಿತ .................................................. .

19. ಗುಡಪಾನಂಗಳೊಳದ್ದೆ ಬೇವಿನ ಫಲಂ .................................................. .

20. ನುಡಿಯಲು ಬಾರದು .................................................. ನುಡಿಗಳ.

21. 'ಅ' ಪಟ್ಟಿಯಲ್ಲಿನ ಪದಗಳಿಗೆ ಸರಿಹೊಂದುವ ಪದಗಳನ್ನು 'ಬ' ಪಟ್ಟಿಯಿಂದ ಆರಿಸಿ, ಹೊಂದಿಸಿ ಬರೆಯಿರಿ : $5 \times 1 = 5$

| ಅ | | ಬ | |
|---|---|---|---|
| i) | ಜಂಗಾಲು | ಅ) | ನುಡಿಗಟ್ಟು |
| ii) | ಸಿಂಹಪಾಲು | ಆ) | ಪೋರ್ಚುಗೀಸ್ |
| iii) | ಕಾಡುಮೇಡು | ಇ) | ಪರ್ಷಿಯನ್ |
| iv) | ಅಂಜಿಕೆ | ಈ) | ಜೋಡುನುಡಿ |
| v) | ನಗುನಗುತ | ಉ) | ದ್ವಿರುಕ್ತಿ |
| | | ಊ) | ಕೃದಂತ ಭಾವನಾಮ |
| | | ಋ) | ತದ್ಧಿತಾಂತ ಭಾವನಾಮ |
| | | ೠ) | ತದ್ಧಿತಾಂತಾವ್ಯಯ |

*ಉತ್ತರ :* i) ________________

ii) ________________

iii) ________________

iv) ________________

v) ________________

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರ ಬರೆಯಿರಿ : $10 \times 1 = 10$

22. ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ವಿಚಾರವಾಗಿ ತರಬೇತು ಕೊಡುತ್ತವೆ ?

________________

________________

23. ಮನುಷ್ಯನಿಗೆ ಲೆಕ್ಕವಿಡುವ ಅವಶ್ಯಕತೆ ಯಾವಾಗ ಉಂಟಾಯಿತು ?

________________

________________

24. ಅಳು ಮಿತಿಮೀರಿದರೆ ಏನಾಗುತ್ತದೆ ?

________________

________________

25. ಗೌರಿ ಸಿದ್ದಪ್ಪನನ್ನು ನಾಗರಹಾವಿನಿಂದ ಹೇಗೆ ರಕ್ಷಿಸಿದಳು ?

26. ಪಾಟಲೀಪುರಕ್ಕೆ ಬಂದ ಅಮಾತ್ಯ ಎಲ್ಲಿ ಅಡಗಿಕೊಂಡಿದ್ದ ?

27. ಭಾರತದ ಸಮುದ್ರ ತೀರವು ಹೇಗೆ ಕಂಗೊಳಿಸುತ್ತಿದೆ ?

28. ಆದಿಕಾಲದ ಮಾನವರು ಭೂಮಿಯನ್ನು ಯಾವ ರೂಪದಲ್ಲಿ ಕಂಡರು ?

29. ಸರ್ವಜ್ಞನಾಗಲು ಏನನ್ನು ಮಾಡಬೇಕು ?

30. ಲೋಕದಲ್ಲಿ ಬೆಲೆಯಾದದ್ದು ಯಾವುದು ?

31. ಶಶಿಯೊಳಗೆ ಎಂತಹ ಕಳೆ ಅಡಗಿದೆ ?

ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $15 \times 2 = 30$

32. ಆಂಗ್ಲ ಭಾಷೆ ವಿಶ್ವವ್ಯಾಪಿಯಾಗಲು ಕಾರಣವೇನು ?

33. ಗೌರಿ ಸಿದ್ದೇಗೌಡರಿಗೆ ಮಗನ ಬಗ್ಗೆ ಕೋಪ ಬಂದ ಸಂದರ್ಭವನ್ನು ವಿವರಿಸಿ.

34. ಕಡಿದಾಳ್ ಮಂಜಪ್ಪನವರು 'ನಾನು ಎರಡು ದೋಣಿಗಳ ಮೇಲೆ ಕಾಲಿಟ್ಟಿದ್ದೆ' ಎಂದು ಹೇಳಲು ಕಾರಣವೇನು ?

35. ಯುವಕರಲ್ಲಿ ಅಪಾರ ಶಕ್ತಿ ಇದ್ದರೂ ಗುಲಾಮರಂತೆ ವರ್ತಿಸಲು ಕಾರಣವೇನು ?

36. ಭಾರತೀಯ ನೌಕಾಪಡೆಯ ಬಗ್ಗೆ ಪುರಾಣಗಳಲ್ಲಿ ಯಾವ ಉಲ್ಲೇಖಗಳು ದೊರೆಯುತ್ತವೆ ?

37. ಚಂದನದಾಸನಿಗೆ ಒದಗಿದ ವಿಪತ್ತು ಯಾವುದು ?

38. ಕವಿ ಆಹಾರದ ನಿರೀಕ್ಷೆಯಲ್ಲಿದ್ದ ಸಿಂಹವನ್ನು ಹೇಗೆ ವರ್ಣಿಸಿದ್ದಾನೆ ?

39. ತಾಮ್ರ ತವರಗಳು ಕರಗಿ ಕೂಡಿ ಘನ ಘಂಟೆಯಾದ ಪರಿ ಯಾವುದು ?

40. ನಗುವಿನ ಮಹತ್ವವನ್ನು ಕವಿಯ ಮಾತುಗಳಲ್ಲಿ ಬರೆಯಿರಿ.

41. ರಕ್ತ ಮೀರಿದ ಸಂಬಂಧದ ಹಿನ್ನೆಲೆ ಯಾವುದು ?

42. ಯಕ್ಷನು ಧರ್ಮಜನನ್ನು ಮೆಚ್ಚಿದ ಪ್ರಸಂಗವನ್ನು ಕುರಿತು ಬರೆಯಿರಿ.

43. ಮುಕ್ತಾಯಕ್ಕನ ಅಭಿಪ್ರಾಯದಂತೆ ಯೋಗ ಹೇಗಿರಬೇಕು ?

44. ಲಕ್ಷ್ಮೀಧರಾಮಾತ್ಯನ ಶಾಸನ ಸೂಚಿಸಿರುವಂತೆ ಲೋಕೋಪಕಾರಿ ಕಾರ್ಯಗಳಾವುವು ?

45. ಮಂಜಪ್ಪ ಮತ್ತು ಗುಮಾಸ್ತರ ಸಂಭಾಷಣೆಯಲ್ಲಿ ಅಪಾಲಜಿ ಪ್ರಸಂಗವನ್ನು ತಿಳಿಸಿ.

46. ನಕುಲಾದಿ ಭೀಮರಿಗೆ ದುರ್ಗತಿ ಒದಗಿದ ಪ್ರಸಂಗವನ್ನು ವಿವರಿಸಿ.

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ : $5 \times 3 = 15$

47. ನನ್ನಿಂದ ಏನಾದರೂ ಸಹಾಯ ಬೇಕೇ ಮೇಷ್ಟ್ರೇ ?

48. 'ಶಕ್ತಿ ಸೌಭಾಗ್ಯ ಚಿರ ಜೀವನದ ಒಳಗುಟ್ಟು.'

49. ಕೋಪಾತುರನಪ್ಪನಾವನುಂ ಬಟ್ಟಪನೆ ?

50. ಮಾವು ಬೇವು ಫಲ ಬಲಾಬಲ.

51. ‘ಬಿಸಿಲೀನ ಬೇಗೆ ಸುಡಲಿಲ್ಲ.’

ಈ ಕವಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ : 2 × 3 = 6

52. ನೃಪತುಂಗ

53. ಎಚ್.ಕೆ. ಬಾಲಸೂರಿ

54. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : $1 \times 3 = 3$

ಧನು ಶರಮೆತ್ತ ನಿನ್ನ ತಪಮೆತ್ತ ವಿಚಿತ್ರ ಮಿದಲ್ತೆ ಧಾತ್ರಿಯೊಳ್

55. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ : $1 \times 3 = 3$

'ದಾಳಿಂಬದ ಬೀಜದಂತಿರುವ ಹಲ್ಲುಗಳು ಶುಭ್ರ ಪ್ರಕಾಶ ಬೀರುತ್ತವೆ.'

56. ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆಯನ್ನು ವಿಸ್ತರಿಸಿ ಬರೆಯಿರಿ : $1 \times 3 = 3$

— ಚಿಂತೆಯೇ ಮುಪ್ಪು ಸಂತೋಷವೇ ಯೌವ್ವನ

— ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ

— ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು

57. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ಆರವಮಂ ____________________

____________________

____________________

____________________ಬಿಮರ್ತನುರಗ ಪತಾಕಂ.

ಅಥವಾ

ಜನ್ಮಭೂಮಿಯ ____________________

____________________

____________________

____________________ಸಂಬಂಧವೇ ಎಲ್ಲ.

58. ಈ ಕೆಳಗಿನ ಪದ್ಯಭಾಗದ ಸಾರಾಂಶವನ್ನು ಬರೆಯಿರಿ : 1 × 4 = 4

ತಾನು ಉಣ್ಣದ ಪರರಿಗಿಕ್ಕದ ಧನವಿದ್ದೇತಕೆ
ಮಾನಹೀನನಾಗಿ ಬಾಳ್ವ ಮನುಜನೇತಕೆ
ನ್ಯೂನ ಹೆಚ್ಚು ನೋಡುವಲ್ಲಿ ಇರುವುದೇತಕೆ
ತನ್ನ ಬಳಗವೆರಸಿ ಉಣ್ಣದ ಭಾಗ್ಯವೇತಕೆ.

59. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

— ನಗೆಗೆ ಇರುವ ವಿಷಯ ಅಥವಾ ಸಾಮಗ್ರಿಗಳನ್ನು ಕುರಿತು ಬರೆಯಿರಿ.
— ಅಂಗುಲಿಮಾಲನ ಮನಸ್ಸು ಪರಿವರ್ತನೆಗೊಂಡ ಬಗೆ ಹೇಗೆ ?
— ಗೌರಿ ಸಿದ್ದೇಗೌಡರ ಜೀವ ಉಳಿಸಿದ ಎರಡು ಪ್ರಸಂಗಗಳನ್ನು ಬರೆಯಿರಿ.

60.

61. ಈ ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಕುರಿತು ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಕಿರಾತಾರ್ಜುನರ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

— ಪಾಂಡವರು ಸರೋವರದ ಬಳಿಗೆ ಬರಲು ಕಾರಣವಾದ ಪ್ರಸಂಗವನ್ನು ವಿವರಿಸಿ.

62. — ನೀವು ಸರ್ಕಾರಿ ಪ್ರೌಢಶಾಲೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿನ ವಿದ್ಯಾರ್ಥಿ ಗೌತಮ್ / ತನ್ಮಯಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆ ಕುರಿತು ಗೆಳೆಯ / ಗೆಳತಿಗೆ ಪತ್ರ ಬರೆಯಿರಿ.

$1 \times 5 = 5$

ಅಥವಾ

— ನಿಮ್ಮ ಬಡಾವಣೆಯ ದಾರಿದೀಪ ಸರಿಪಡಿಸುವಂತೆ ಕೋರಿ ನಗರಸಭೆ ಅಧ್ಯಕ್ಷರಿಗೊಂದು ಪತ್ರ ಬರೆಯಿರಿ.

63. ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದಕ್ಕೆ** ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ಜನಸಂಖ್ಯಾ ಶಿಕ್ಷಣದ ಮಹತ್ವ

— ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು

— ಗಣಿಗಾರಿಕೆಯಿಂದ ಪರಿಸರ ಮಾಲಿನ್ಯ